# <u>ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು</u>

**ವಿಷಯ:** 2018–19ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ **<u>ಬೆಳಗಾವಿ ವಿಭಾಗದ</u>** ಮೊರಾರ್ಜಿ ದೇಸಾಯಿ ವಸತಿ ಶಾಲೆ/ಪ.ಪೂ ಕಾಲೇಜು/ಮಾದರಿ ವಸತಿ ಶಾಲೆ(ನವೋದಯ) ಸರ್ಕಾರಿ ಮುಸ್ಲಿಂ ವಸತಿಶಾಲೆಗಳ ನಿರ್ವಹಣೆಗೆ 1ನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:**
1) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 257 ಎಂಡಿಎಸ್ 2018 ದಿನಾಂಕ: 06.04.2018
2) ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲೂಡಿ 257 ಎಂಡಿಎಸ್ 2018 ದಿನಾಂಕ: 11.04.2018

******

<u>ಪ್ರ ಸ್ತಾ ವ ನೆ:–</u>

ಉಲ್ಲೇಖ (1) ರ ಸರ್ಕಾರಿ ಆದೇಶದಲ್ಲಿ 2017–18ನೇ ಸಾಲಿನಲ್ಲಿ ಚಾಲ್ತಿಯಲ್ಲಿರುವ ಯೋಜನೆಗಳನ್ನು 2018–19ನೇ ಸಾಲಿನವರೆಗೆ ಮುಂದುವರೆಸಲು ಆದೇಶಿಸಿದೆ. ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆಗೆ ಮೊದಲನೇ ತ್ರೈಮಾಸಿಕ ಕಂತಾಗಿ ರೂ.3576.64 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆಳಗಾವಿ ವಿಭಾಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ(ನವೋದಯ) ಸರ್ಕಾರಿ ಮುಸ್ಲಿಂ ವಸತಿಶಾಲೆಗಳ ನಿರ್ವಹಣೆಗೆ ಮೊದಲನೇ ತ್ರೈಮಾಸಿಕ ಕಂತಾಗಿ ರೂ.301.08ಲಕ್ಷ(ಮೂರು ನೂರ ಒಂದು ಲಕ್ಷದ ಎಂಟು ಸಾವಿರ ರೂಗಳು ಮಾತ್ರ)ಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಅನುದಾನ ಬಿಡುಗಡೆ ಮಾಡಲು ನಿರ್ಧರಿಸಿದ್ದು ಅದರಂತೆ ಈ ಆದೇಶ.

**ಆದೇಶ**

**ಸಂಖ್ಯೆ: ಅಸಂನಿ/ವಶಾ/ಅನು/ಸಿಆರ್–04/ಬೆಳ/2018–19** **ದಿನಾಂಕ:** 30.04.2018

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಅಂಶಗಳನ್ನಾಧರಿಸಿ, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆಳಗಾವಿ ವಿಭಾಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಅಲ್ಪಸಂಖ್ಯಾತರ ಮಾದರಿ ವಸತಿ ಶಾಲೆ(ನವೋದಯ) ಸರ್ಕಾರಿ ಮುಸ್ಲಿಂ ವಸತಿಶಾಲೆಗಳ ನಿರ್ವಹಣೆಗೆ ಮೊದಲನೇ ತ್ರೈಮಾಸಿಕ ಕಂತಾಗಿ ಒಟ್ಟು **ರೂ.301.08ಲಕ್ಷ(ಮೂರು ನೂರ ಒಂದು ಲಕ್ಷದ ಎಂಟು ಸಾವಿರ ರೂಗಳು ಮಾತ್ರ)ಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ** ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅನುದಾನ ಬಿಡುಗಡೆ ಮಾಡಿದೆ.

**ನಿಬಂಧನೆಗಳು:–**

1) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಕಡ್ಡಾಯವಾಗಿ 2018–19ನೇ ಸಾಲಿನ ವಸತಿ ಶಾಲೆಗಳ ಆದೇಶದಲ್ಲಿ ನಿರ್ವಹಣಾ ವೆಚ್ಚಗಳನ್ನು ಪಾವತಿಸಲು ಮಾತ್ರ ಭರಿಸತಕ್ಕದ್ದು.
2) ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು **<u>ಅನುಬಂಧದಲ್ಲಿ ಶಾಲಾವಾರು ವೆಚ್ಚವಾರು ನಮೂದಿಸಿರುವಂತೆ ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಮಾತ್ರ ಬಳಸಿಕೊಳ್ಳತಕ್ಕದ್ದು</u>**, ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡುವಂತಿಲ್ಲ. ತಪ್ಪಿದ್ದಲ್ಲಿ ಮುಂದಿನ ಎಲ್ಲಾ ಆಗು ಹೋಗುಗಳಿಗೆ ತಮ್ಮನ್ನು ನೇರ ಹೊಣೆಗಾರನ್ನಾಗಿ ಮಾಡಲಾಗುವುದು.

Contd...2

3) ಬಿಡುಗಡೆ ಮಾಡಿರುವ ಅನುದಾನದಲ್ಲಿ ಭರಿಸಬೇಕಾದ ವೆಚ್ಚಗಳ ಶಾಲಾ/ಕಾಲೇಜುವಾರು ವಿವರ ಪ್ರತ್ಯೇಕವಾಗಿ ಅನುಬಂಧದಲ್ಲಿ ಈ ಆದೇಶದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

III. ಆಹಾರ ವೆಚ್ಚ ಪ್ರತಿ ಮಾಹೆಗೆ, ಪ್ರತಿ ವಿದ್ಯಾರ್ಥಿಗೆ ರೂ.1500.00 ಬಿಡುಗಡೆಗೊಳಿಸಲಾಗಿದೆ.

4)ಎಲ್ಲಾ ಖರೀದಿ, ರಿಪೇರಿ ಹಾಗೂ ಸೇವೆಗಳನ್ನು ಕಡ್ಡಾಯವಾಗಿ ಕೆ.ಟಿ.ಪಿ.ಪಿ. ಕಾಯ್ದೆ ನಿಯಮಾನುಸಾರ ಖರ್ಚು ಭರಿಸತಕ್ಕದ್ದು.

5) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲಾ ಕಛೇರಿಗಳಲ್ಲಿ ಅಥವಾ ವಸತಿಶಾಲೆಗಳ ಪ್ರಾಂಶುಪಾಲರಿಗೆ ನಿಯಮಾನುಸಾರ ಮರುಬಿಡುಗಡೆಗೊಳಿಸಿ ಖರ್ಚು ಭರಿಸತಕ್ಕದ್ದು.

6) ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನ ಭರಿಸಿದ ವಿವರ ಪ್ರತಿ ತಿಂಗಳು 10ನೇ ತಾರೀಖಿನ ಒಳಗೆ (ಖಜಾನೆಯಿಂದ ಪಡೆದ 62ಬಿ ಪ್ರತಿಯೊಂದಿಗೆ) ನಿರ್ದೇಶನಾಲಯಕ್ಕೆ ಸಲ್ಲಿಸತಕ್ಕದ್ದು.

7) ವಿದ್ಯುತ್, ದೂರವಾಣಿ, ಬಾಡಿಗೆ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬಹುದು. ಹೊಸದಾಗಿ ಖರೀದಿ ಮಾಡಬೇಕಾದ ವಸ್ತುಗಳನ್ನು ಚುನಾವಣಾ ನೀತಿ ಸಂಹಿತೆ ಮುಗಿದ ನಂತರ ಪ್ರಕ್ರಿಯೆ ನಡೆಸಲು ಸೂಚಿಸಿದೆ.

ಇದಕ್ಕೆ ತಗಲುವ ವೆಚ್ಚವನ್ನು ಆಬ್ಜೆಕ್ಟ್ ಕೋಡ್ (059) ಲೆಕ್ಕಶೀರ್ಷಿಕೆ 2225-03-277-2-80 ಅಲ್ಪಸಂಖ್ಯಾತರ ವಸತಿ ಶಾಲೆಗಳ ನಿರ್ವಹಣೆ ರಾಜ್ಯವಲಯ ಯೋಜನೆ 2018-19ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸುವುದು.

(ಅಕ್ರಂ ಪಾಷ)
**ನಿರ್ದೇಶಕರು,**
**ಅಲ್ಪಸಂಖ್ಯಾತರ ನಿರ್ದೇಶನಾಲಯ,**
**ಬೆಂಗಳೂರು.**

**ಪ್ರತಿಯನ್ನು:-**

1. ಕರ್ನಾಟಕ ಮಹಾಲೇಖಪಾಲರು, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ಬೆಂಗಳೂರು.
3. ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವೆಚ್ಚ-3, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕೀಕರಣ ಕೇಂದ್ರ, 2ನೇ ಮಹಡಿ, ಖನಿಜ ಭವನ, ಬೆಂಗಳೂರು.
5. ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಗತ್ಯಕ್ರಮಕ್ಕಾಗಿ ಹಾಗೂ ಪ್ರಾಂಶುಪಾಲರಿಗೆ (ಜಿಲ್ಲಾ ಅಧಿಕಾರಿಗಳ ಮೂಲಕ)
6. ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು.
7. ಲೆಕ್ಕಪತ್ರ ಶಾಖೆ.
8. ಹೆಚ್ಚುವರಿ ಪ್ರತಿ/ಕಛೇರಿ ಪ್ರತಿ.